ಸಂಖ್ಯೆ: ಸಿಬ್ಬಂದಿ(1)/ವಿವ-72/2014-15 ದಿನಾಂಕ:30.08.2014.

**ದಿನಾಂಕ: 30.08.2014 ರಂದು ನಡೆದ ಆಡಳಿತ ತರಬೇತಿ ಸಂಸ್ಥೆ, ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಹಾಗೂ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಗಳ ಬೋಧಕರ ಸಭೆಯ ನಡವಳಿಗಳು**

ಮಾನ್ಯ ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರು ಸಭೆಗೆ ಆಗಮಿಸಿದ ಎಲ್ಲರನ್ನು ಸ್ವಾಗತಿಸಿ, ಈ ಕೆಳಕಂಡ ಅಂಶಗಳ ಬಗ್ಗೆ ಗಮನಸೆಳೆದರು.

ಅಂಶಗಳು:-

1. ಆಡಳಿತ ತರಬೇತಿ ಸಂಸ್ಥೆ ಮತ್ತು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮತ್ತು ರಾಜ್ಯನಗರಾಭಿವೃದ್ಧಿ ಸಂಸ್ಥೆಗಳಲ್ಲಿ ನಡೆದಿರುವ ಅವ್ಯವಹಾರಗಳು, ಅದರಿಂದ ಎ.ಟಿ.ಐ., ಎಸ್.ಐ.ಆರ್.ಡಿ., ಮತ್ತು ಎಸ್.ಐ.ಯು.ಡಿ., ಸಂಸ್ಥೆಗಳಿಗೆ ಆಗಿರುವ ಆರ್ಥಿಕ ನಷ್ಟ, ಸಾರ್ವಜನಿಕ ಹಣದುರುಪಯೋಗ ಮತ್ತು ಸಾರ್ವಜನಿಕ ಹಣದಿಂದ ಕೆಲವರಿಗೆ ಆಗಿರುವ ಅಪಾರ ಲಾಭದ ಬಗ್ಗೆ ಸರ್ಕಾರಕ್ಕೆ ಈಗಾಗಲೇ ವರದಿ ಒಪ್ಪಿಸಲಾಗಿದೆ ಹಾಗೂ ಇನ್ನೂ ಹೆಚ್ಚಿನ ತನಿಖೆಯನ್ನು ಲೋಕಾಯುಕ್ತ ಅಥವಾ ಸಿ.ಬಿ.ಐ. ಮೂಲಕ ನಡೆಸಬೇಕೆಂದು ಸಹ ಕೋರಲಾಗಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು.
2. ಸಂಸ್ಥೆಯ ಹಣಕಾಸು ವ್ಯವಹಾರ, ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಬೇಕು. ಆದುದರಿಂದ ಸ್ಪಷ್ಟವಾಗಿ ಈ ಹಿಂದೆಯೆಲ್ಲಾ ಖಾಸಗೀ ಹೋಟೆಲುಗಳಲ್ಲಿ ಊಟೋಪಚಾರ, ಉಡುಗೊರೆ ಖರೀದಿ, ಯಾವುದೇ ನಿಯಮಗಳನ್ನು ಪಾಲಿಸದೆ ಸ್ವಂತ ಉಪಯೋಗಕ್ಕಾಗಿ ಅಪಾರ ಸಾಮಾಗ್ರಿಗಳ ಖರೀದಿ, ಇತರೆ ದುಂದುವೆಚ್ಚ ಮಾಡುವ ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಕಾನೂನು ರೀತ್ಯಾ ಕ್ರಮಜರುಗಿಸಲಾಗುವುದು. ಇದಲ್ಲದೆ, Social Visit ಎಂಬ ನೆಪದಲ್ಲಿ ಖಾಸಗೀ ಟ್ರಾವೆಲ್ ಏಜೆನ್ಸಿಸ್ ಮೂಲಕ ತರಬೇತಿಗೆ ಹಾಜರಾಗಿರುವ ಪ್ರಶಿಕ್ಷಣಾರ್ಥಿಗಳನ್ನು ಹೊರಗೆ ಕರೆದುಕೊಂಡು ಹೋಗಿ ಬರುವುದನ್ನು ಕೂಡ ಸಂಪೂರ್ಣವಾಗಿ ನಿಷೇಧಿಸಲಾಗಿದೆ.
3. ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿ ಸೂಚಿಸಿರುವ Cannons of Financial Properiety ಅನ್ನು ಉಲ್ಲಂಘಿಸಲು ಅವಕಾಶವಿರುವುದಿಲ್ಲ ಮತ್ತು KTPP Act ಅನ್ನು ಸಹ ಉಲ್ಲಂಘಿಸಲು ಅವಕಾಶವಿರುವುದಿಲ್ಲ. ಈ ರೀತಿ ಮಾಡುವ ಯಾವುದೇ ಸಿಬ್ಬಂದಿ / ಬೋಧಕರು/ ಸಮಾಲೋಚಕರುಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಮತ್ತು ವೆಚ್ಚಮಾಡಿರುವ ಹಣವನ್ನು ಸಹ ಅವರಿಂದ ವಸೂಲು ಮಾಡಲಾಗುವುದು.
4. ಆಡಳಿತ ತರಬೇತಿ ಸಂಸ್ಥೆ ಮತ್ತು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮತ್ತು ರಾಜ್ಯ ನಗರಾಭಿವೃದ್ಧಿ ಸಂಸ್ಥೆಗಳ ವೆಬ್ ಸೈಟ್‌ನಲ್ಲಿ ಕಡ್ಡಾಯವಾಗಿ ತರಬೇತಿಗೆ ಸಂಬಂಧಪಟ್ಟಿರುವ ಎಲ್ಲಾ ಅಂಶಗಳು, ತರಬೇತಿಗೆ ಹಾಜರಾಗಿರುವ ಪ್ರಶಿಕ್ಷಣಾರ್ಥಿಗಳು, ಕೋರ್ಸು ಶೆಡ್ಯೂಲ್, ಎಲ್ಲಾ ತರಬೇತಿ ಮಾಡ್ಯುಲ್‌ಗಳು, ಪ್ರಕರಣಗಳ ಅಧ್ಯಯನಗಳು, ಎಲ್ಲಾ ಪ್ರಕಟಣೆಗಳು, ಇಲ್ಲಿಯವರೆವಿಗೆ ತಯಾರಿಸಲಾಗಿರುವ ಎಲ್ಲಾ ಇ-ಲರ್ನಿಂಗ್ ಮ್ಯಾಡುಲ್‌ಗಳು ಕಾಲಮಿತಿಯಲ್ಲಿ ಸಮಯಬದ್ಧವಾಗಿ ಅದನ್ನು ಅಪ್‌ಲೋಡ್ ಮಾಡಬೇಕು. ಮುಂದುವರೆದಂತೆ, ಸಂಸ್ಥೆಗಳು ಹೊಂದಿರುವ ಬ್ಯಾಂಕಿನ ಖಾತೆ ಹಾಗೂ ವಿವರಗಳು ಹದಿನೈದು ದಿನಕ್ಕೊಮ್ಮೆ ಅಪಡೇಟ್ ಆಗಿರುವ ಪಾಸ್‌ಬುಕ್‌ನ ಪ್ರತಿ, ಪ್ರತಿವಾರ ಆಗುತ್ತಿರುವ ಎಲ್ಲಾ ಆದಾಯ ಮತ್ತು ವೆಚ್ಚಗಳು, ಖಜಾನೆಗೆ ಕಳುಹಿಸಿರುವ ಬಿಲ್ಲುಗಳನ್ನು ಒಳಗೊಂಡಂತೆ ಕಡ್ಡಾಯವಾಗಿ ವೆಬ್‌ಸೈಟ್‌ನಲ್ಲಿ

ಅಳವಡಿಸಬೇಕು. ವಾಹನಗಳ ಲಾಗ್ ಪುಸ್ತಕ, ಇಂಧನವೆಚ್ಚ, ಸಂಸ್ಥೆಯ ಚಾಲ್ತಿಯಲ್ಲಿರುವ ಎಲ್ಲಾ ಟೆಂಡರುಗಳ ವಿವರಗಳನ್ನು ಸಹ ಕಡ್ಡಾಯವಾಗಿ ಅಳವಡಿಸಬೇಕು. ಕಚೇರಿಗಳಿಂದ ಹೊರಡಿಸುತ್ತಿರುವ ಎಲ್ಲಾ ಪತ್ರಗಳು, ಸುತ್ತೋಲೆಗಳು, ನೋಟೀಸ್ ಮತ್ತು ಸಭಾ ನಡವಳಿಯನ್ನು ಸಹ ಕಡ್ಡಾಯವಾಗಿ ಅಳವಡಿಸಬೇಕು.

5. ಪ್ರಸಕ್ತ ಸಾಲಿನಲ್ಲಿ ಈಗಾಗಲೇ ಅರ್ಧ ವರ್ಷ ಕಳೆದಿದ್ದು, ಮಂಗಳವಾರ ಅಂದರೆ, ದಿನಾಂಕ 02.09.2014ರ ಒಳಗಾಗಿ ಈವರೆಗಿನ ತರಬೇತಿ ಕಾರ್ಯಕ್ರಮಗಳ ವಸ್ತುಸ್ಥಿತಿ ವರದಿಯನ್ನು ಸಲ್ಲಿಸತಕ್ಕದ್ದು. ವರದಿಯು ಈ ಎಲ್ಲಾ ಅಂಶಗಳನ್ನು ಒಳಗೊಂಡಿರಬೇಕು – ವಾರ್ಷಿಕ ತರಬೇತಿ ಕಾರ್ಯಕ್ರಮಕ್ಕನುಗುಣವಾಗಿ ಹಮ್ಮಿಕೊಂಡಿರುವ ಒಟ್ಟು ತರಬೇತಿ ಕಾರ್ಯಕ್ರಮಗಳು, ಹಾಗೂ ಕಾರಣಗಳೊಂದಿಗೆ ಮುಂದೂಡಲಾದ ಹಾಗೂ ರದ್ದುಗೊಳಿಸಲಾದ ತರಬೇತಿಗಳ ಸಂಖ್ಯೆ ಹಾಗೂ ತರಬೇತಿಗೆ ಸಂಬಂಧಿಸಿದ ಹಣಕಾಸು ವಿವರಗಳನ್ನು ಸೂಚಿಸಲಾಯಿತು.

6. ಆಡಳಿತ ತರಬೇತಿ ಸಂಸ್ಥೆಯಲ್ಲಿ ಮತ್ತು ರಾಜ್ಯ ನಗರಾಭಿವೃದ್ಧಿ ಸಂಸ್ಥೆಯಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳ ಗರಿಷ್ಠ ಬಳಕೆ / ಸದ್ಬಳಕೆಯ ಕೊರತೆ ಕಂಡುಬಂದಿದೆ. ಇನ್ನು ಮುಂದೆ ಲಭ್ಯವಿರುವ ಸೌಲಭ್ಯಗಳ ಗರಿಷ್ಠ ಬಳಕೆ ಮಾಡುವ ದೃಷ್ಟಿಯಿಂದ ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚಿಸಲಾಗುವುದು.

7. ತರಬೇತಿಗೆ ಅನುಮತಿ ಕೋರುವಾಗ ಸಲ್ಲಿಸಬೇಕಾದ ವಿಧಾನವನ್ನು ಈಗಾಗಲೇ ಜುಲೈ ಮತ್ತು ಆಗಸ್ಟ್‌ನಲ್ಲಿ ಸುತ್ತೋಲೆಗಳ ಮೂಲಕ ಎಲ್ಲರಿಗೂ ತಿಳಿಸಲಾಗಿದೆ, ಅದರಂತೆ ಕಡತಗಳನ್ನು ಸಲ್ಲಿಸುವುದು. ಯಾವ ಕಡತವನ್ನು ಸಹ ಯಾವುದೇ ಕಾರಣಕ್ಕೂ ತರಬೇತಿ ಸಂಯೋಜಕರ ಹಂತದಲ್ಲಿ ತೆರೆಯಬಾರದು. ಕಡತಗಳನ್ನು ತರಬೇತಿ ಶಾಖೆಯ ಹಂತದಲ್ಲಿ ತೆರೆದು ಒಂದು ತರಬೇತಿಗೆ ಸಂಬಂಧಿಸಿದ ವಿಷಯವನ್ನು ಸಂಪೂರ್ಣವಾಗಿ ಒಂದೇ ಕಡತದಲ್ಲಿ ನಿರ್ವಹಣೆ ಮಾಡಬೇಕು. ಹಾಗೂ ತರಬೇತಿ ಪ್ರಾರಂಭವಾಗುವುದಕ್ಕೆ 45 ದಿನಗಳ ಮುಂಚಿತವಾಗಿ ಕಡತವನ್ನು ಪ್ರಶಿಕ್ಷಣಾರ್ಥಿಗಳ ಆಹ್ವಾನ ಪತ್ರದೊಂದಿಗೆ ಅನುಮೋದನೆಗೆ ಕಡ್ಡಾಯವಾಗಿ ಸಲ್ಲಿಸಬೇಕು. ಕಡತದ ಪ್ರತಿ ಹಾಳೆಯಲ್ಲಿ ಕಡ್ಡಾಯವಾಗಿ ಸಂಖ್ಯೆಗಳನ್ನು ನಮೂದಿಸಿರಬೇಕು. ಸಹಿಗಾಗಿ ಸಲ್ಲಿಸುವ ಪ್ರತಿ ಪತ್ರಕ್ಕೂ ತರಬೇತಿ ಸಂಯೋಜಕರ ಕಿರು ಸಹಿಯಿರಬೇಕು. ತರಬೇತಿ ಪ್ರಾರಂಭವಾದ ದಿನವೇ ನಿಯೋಜಿಸಲಾಗಿರುವ ಪ್ರಶಿಕ್ಷಣಾರ್ಥಿಗಳಲ್ಲಿ ಗೈರುಹಾಜರಾಗಿರುವ ಪ್ರಶಿಕ್ಷಣಾರ್ಥಿಗಳ ಪಟ್ಟಿಯನ್ನು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಿಗೆ ಕಳುಹಿಸಲು ತರಬೇತಿ ಸಂಯೋಜಕರು ತಪ್ಪದೇ ಪತ್ರ ಸಲ್ಲಿಸಬೇಕು. ತರಬೇತಿ ಮುಗಿದ 24 ಗಂಟೆಯೊಳಗೆ ತರಬೇತಿಯ ಖರ್ಚುವೆಚ್ಚಗಳ ವಿವರಗಳನ್ನು ಹಾಗೂ ತರಬೇತಿ ಸಂಯೋಜಕರು ತರಬೇತಿ ಮುಕ್ತಾಯದ ವಿವರಗಳನ್ನು ತಪ್ಪದೇ ಲೆಕ್ಕ ಶಾಖೆಗೆ ಕಳುಹಿಸುವುದು. ಲೆಕ್ಕ ಶಾಖೆಯು ಕಡ್ಡಾಯವಾಗಿ 02 ದಿನಗಳೊಳಗೆ ಅದನ್ನು ಪರಿಶೀಲಿಸಿ ಅಭಿಪ್ರಾಯದೊಂದಿಗೆ ಜಂಟಿ ನಿರ್ದೇಶಕರು / ನಿರ್ದೇಶಕರ ಮೂಲಕ ಮಹಾ ನಿರ್ದೇಶಕರಿಗೆ ಕಡತ ಸಲ್ಲಿಸುವುದು.

8. ತರಬೇತಿಯ ಎಲ್ಲಾ ಅಂಶಗಳು ಕರಡು ಅನುಮೋದಿತ ಅಂದಾಜು ವೆಚ್ಚ ಒಳಗೊಂಡಂತೆ ಮತ್ತು ಅಂತಿಮ ವೆಚ್ಚಗಳನ್ನು ತಪ್ಪದೇ ವೆಬ್‌ಸೈಟ್‌ನಲ್ಲಿ ಅಳವಡಿಸಬೇಕು. ಜುಲೈನಿಂದಲೇ ತರಬೇತಿ ಸಂಯೋಜಕರಿಗೆ ಯಾವುದೇ ರೀತಿಯ ಮುಂಗಡವನ್ನು ನೀಡಲಾಗುತ್ತಿಲ್ಲ. ಈ ಹಿಂದೆ ನೀಡಿದ ಮುಂಗಡವನ್ನು ತರಬೇತಿ ಸಂಯೋಜಕರುಗಳು ಈ ಕೂಡಲೇ ಲೆಕ್ಕಪತ್ರ ಶಾಖೆಗೆ ತಪ್ಪದೇ ಹಿಂತಿರುಗಿಸುವುದು. ತರಬೇತಿ ಕಾರ್ಯಕ್ರಮದಲ್ಲಿ ತರಬೇತಿಗೆ ಸಂಬಂಧಪಟ್ಟಿದ ಕ್ಷೇತ್ರಭೇಟಿಗೆ ತರಬೇತಿ ಸಂಯೋಜಕರುಗಳು ಪ್ರಶಿಕ್ಷಣಾರ್ಥಿಗಳ ಜೊತೆಯಲ್ಲಿ ಕಡ್ಡಾಯವಾಗಿ ಹೋಗಬೇಕು. ಎಲ್ಲಾ ಕ್ಷೇತ್ರಭೇಟಿಗೆ ನಮ್ಮ ಸಂಸ್ಥೆಗಳ ಅಧಿಕೃತ ವಾಹನವನ್ನು ಬಳಸಬೇಕು. ಪ್ರತಿದಿನ ಪ್ರಶಿಕ್ಷಣಾರ್ಥಿಗಳಿಗೆ ನೀಡಬೇಕಾಗಿರುವ ಓದುವ ಪಠ್ಯಕ್ರಮಗಳು, ಸಂಪನ್ಮೂಲ ವ್ಯಕ್ತಿಗಳಿಂದ ನೀಡಲಾಗಿರುವ ಪಿಪಿಟಿ, ಪ್ರಕರಣಗಳ ಅಧ್ಯಯನಗಳನ್ನು ಕಡ್ಡಾಯವಾಗಿ ಆಯಾ ದಿನವೇ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಅಳವಡಿಸಬೇಕು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಇ-ಮೇಲ್ ಮೂಲಕ

ಸಹ ಕಳುಹಿಸಿಕೊಡಬೇಕು. ಇದು ಸಂಬಂದಪಟ್ಟ ತರಬೇತಿ ಸಂಯೋಜಕರುಗಳ ಜವಾಬ್ದಾರಿಯಾಗಿರುತ್ತದೆ. ಮರುದಿನ ಪುನರಾವಲೋಕನ ಅಧಿವೇಶನದಲ್ಲಿ ಕಡ್ಡಾಯವಾಗಿ ಈ ವಿಷಯದ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ಇ-ಮೇಲ್ ಮೂಲಕ ಕಳುಹಿಸಲಾಗಿರುವ ಓದುವ ಪಠ್ಯಕ್ರಮಗಳು, ಸಂಪನ್ಮೂಲ ವ್ಯಕ್ತಿಗಳಿಂದ ನೀಡಲಾಗಿರುವ ಪಿಪಿಟಿ, ಪ್ರಕರಣಗಳ ಅಧ್ಯಯನಗಳು, ಅವರ ಇ-ಮೇಲ್‌ಗೆ ತಲುಪಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಮತ್ತು ಅದನ್ನು ವೆಬ್‌ಸೈಟಿನಲ್ಲಿ ಅಳವಡಿಸಲಾಗಿರುವ ಬಗ್ಗೆಯೂ ಸಹ ಪ್ರಶಿಕ್ಷಣಾರ್ಥಿಗಳ ಗಮನ ಸೆಳೆಯಬೇಕು. ಪ್ರತಿ ಕೋರ್ಸ್ ಪುನರಾವಲೋಕನ ಅಧಿವೇಶನದಲ್ಲಿ ಸಂಸ್ಥೆಯ ಆಯಾ ತರಬೇತಿ ಸಂಯೋಜಕರು ಕಡ್ಡಾಯವಾಗಿ ಹಾಜರಿರಬೇಕು. ಪ್ರಶಿಕ್ಷಣಾರ್ಥಿಗಳ ಅನಿಸಿಕೆಗಳೂ ಹಿಮ್ಮಾಹಿತಿಯನ್ನು ಕೋರ್ಸ್‌ನ ಅಂತಿಮ ವರದಿಯಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

9. ತರಬೇತಿಗೆ ಪದೇ ಪದೇ ಒಬ್ಬರೇ ಹೊರಸಂಪನ್ಮೂಲ ವ್ಯಕ್ತಿಯನ್ನು ಆಹ್ವಾನಿಸುವಂತಿಲ್ಲ ಹಾಗೂ ಸಂಸ್ಥೆಯ ಧ್ಯೆಯೋದ್ದೇಶಗಳಿಗೆ ಹೊರತುಪಡಿಸಿ ತಮ್ಮದೇ ಆದ ಉದ್ದೇಶಗಳನ್ನು (Vendors) ಸಾದರಪಡಿಸುವಂತಹ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸುವಂತಿಲ್ಲ. ಹೊರಸಂಪನ್ಮೂಲ ವ್ಯಕ್ತಿಗಳು ತರಬೇತಿ ಧ್ಯೇಯೋದ್ದೇಶಗಳು ಮತ್ತು ವಿಷಯಕ್ಕನುಗುಣವಾಗಿ ಪ್ರಚಲಿತ ಮಾಹಿತಿಯೊಂದಿಗೆ ಮಾತನಾಡುವಂತೆ ತರಬೇತಿ ಸಂಯೋಜಕರು ಜಾಗ್ರತೆವಹಿಸಬೇಕು.
10. ತರಬೇತಿಗಳ ಅಂಗವಾಗಿ ವಾರಕ್ಕೊಮ್ಮೆ ಆಯೋಜಿಸುವ ಹೆರಿಟೇಜ್ ವಾಕ್ ಹಾಗೂ ಹೆರಿಟೇಜ್ ಸೈಕಲಿಂಗ್ ಅನ್ನು ಸಂಬಂಧಪಟ್ಟ ಪ್ರಾಚ್ಯವಸ್ತು, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಸಹಯೋಗದೊಂದಿಗೆ ಮುಂದುವರಿಸುವುದು.
11. ತರಬೇತಿ ಸಹಾಯಕರ ಸಂಪೂರ್ಣ ಜವಾಬ್ದಾರಿ ತರಬೇತಿ ಸಂಯೋಜಕರದಾಗಿದ್ದು, ತರಬೇತಿ ದಿನಗಳಲ್ಲಿ ತರಬೇತಿ ಸಹಾಯಕರು ಬೆಳಗ್ಗೆ 8.30 ಗಂಟೆಗೆ ಹಾಗೂ ತರಬೇತಿ ಸಂಯೋಜಕರು ಬೆಳಗ್ಗೆ 8.45 ಗಂಟೆಗೆ ತಪ್ಪದೇ ಸಂಸ್ಥೆಯಲ್ಲಿ ಹಾಜರಿರಬೇಕು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಬೇಕು.
12. ಸಂಸ್ಥೆಯ ವಾಹನಗಳ ಬಳಕೆಯನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಮೂರು ಸಂಸ್ಥೆಯವರು ಕಾಲಕಾಲಕ್ಕೆ ಜಂಟಿ ನಿರ್ದೇಶಕರು, ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ದಿ ಸಂಸ್ಥೆ ಮತ್ತು ನಿರ್ದೇಶಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ರವರುಗಳು ಸಮನ್ವಯ ಸಭೆಗಳನ್ನು ಆಯೋಜಿಸಿ ಮೂರೂ ಸಂಸ್ಥೆಗಳ ಅಗತ್ಯತೆಗಳನ್ನು ಗುರುತಿಸಿ ತರಬೇತಿ ಶೆಡ್ಯೂಲ್‌ನಂತೆ ಸ್ಥಳೀಯ ಭೇಟಿಯನ್ನು ಆಯೋಜಿಸಬೇಕು.
13. ಚಾಲ್ತಿಯಲ್ಲಿರುವ ಅನೇಕ ಮಾಡ್ಯೂಲ್‌ಗಳನ್ನು ಉನ್ನತ್ತೀಕರಿಸಬೇಕಿದ್ದು, ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.
14. ಸಂಸ್ಥೆಯ ಲೆಕ್ಕ ಶಾಖೆಗೆ ಲೆಕ್ಕಪತ್ರ ತಪಾಸಣೆಗೆ ಅವಧಿ ನಿಗಧಿಪಡಿಸಲಾಗುವುದು (ಎರಡು ದಿನ) ಹಾಗೂ ಅದರಂತೆ, ಲೆಕ್ಕಪತ್ರ ತಪಾಸಣೆಯನ್ನು ನಿಗಧಿತ ದಿನಾಂಕದೊಳಗಾಗಿ ಕಾರ್ಯವನ್ನು ಪೂರ್ಣಗೊಳಿಸಿ ನಂತರ ಅನುಮೋದನೆಗಾಗಿ ಸಲ್ಲಿಸಬೇಕು.
15. ಪ್ರಾಯೋಜಿತ ತರಬೇತಿಗಳಲ್ಲಿ ಉಳಿದ ಹಣಕಾಸು ವಿವರವನ್ನು ಆಯಾ ಇಲಾಖೆಗಳಿಗೆ ಸಲ್ಲಿಸಬೇಕಾಗಿದ್ದು, ಯಾವುದೇ ಕಾರಣಕ್ಕೂ ಈ ಮೊತ್ತವನ್ನು ಪಂಚಾಯತ್ ನಿಧಿಗೆ ನೇರವಾಗಿ ವರ್ಗಾವಣೆ ಮಾಡಬಾರದು.
16. ಪ್ರಶಿಕ್ಷಣಾರ್ಥಿಗಳ ನೊಂದಣಿಯನ್ನು ವ್ಯವಸ್ಥಿತವಾಗಿ ಕಡ್ಡಾಯಗೊಳ್ಳಬೇಕು ಹಾಗೂ ನೋಂದಣಿ ಫಾರಂ ಎಲ್ಲಾ ಕಡ್ಡಾಯ ಕ್ಷೇತ್ರಗಳನ್ನು ಭರ್ತಿಮಾಡಬೇಕು. ಇ-ಮೇಲ್ ಇಲ್ಲದ ಪ್ರಶಿಕ್ಷಣಾರ್ಥಿಗಳಿಗೆ ಹೊಸ ಇ-ಮೇಲ್ ತೆರೆಯಲು ವ್ಯವಸ್ಥೆ ಮಾಡಬೇಕು. ತರಬೇತಿಗೆ ಸಂಬಂಧಿಸಿದ ಎಲ್ಲಾ ಓದುವ ಸಾಮಗ್ರಿಗಳನ್ನು ಇ-ಮೇಲ್ ಮೂಲಕವೇ ನೀಡತಕ್ಕದ್ದು ಹಾಗೂ ಪ್ರಶಿಕ್ಷಣಾರ್ಥಿಗಳಿಂದ ಈ ಕುರಿತು ಮಾಹಿತಿಯನ್ನು ಪಡೆಯತಕ್ಕದ್ದು. ತರಬೇತಿಯ ಅಗತ್ಯತೆಗನುಗುಣವಾಗಿ ಕನಿಷ್ಠ ಎರಡು ಪ್ರಕರಣ ಅಧ್ಯಯನಗಳು ಹಾಗೂ ಎರಡು ಬೆಸ್ಟ್

ಪ್ರಾಕ್ಟೀಸ್‌ಅನ್ನು ಪ್ರಶಿಕ್ಷಣಾರ್ಥಿಗಳಿಗೆ ನೀಡತಕ್ಕದ್ದು. ಎಲ್ಲಾ ಮಾಹಿತಿಯನ್ನು ಇ-ಮೇಲ್‌ನಲ್ಲಿ ನೀಡಬೇಕು. ಮತ್ತು ವೆಬ್‌ಸೈಟಿನಲ್ಲಿ ಅಳವಡಿಸಬೇಕು. ಯಾವುದೇ ಕಾರಣಕ್ಕೂ ಹೊಸದಾಗಿ ಮುದ್ರಣ ಮಾಡಬಾರದು.

17. ಪ್ರಶಿಕ್ಷಣಾರ್ಥಿಗಳ ಅಗತ್ಯತೆಗಳಿಗೆ ತರಬೇತಿ ಸ್ಪಂದಿಸಬೇಕು ಹಾಗೂ ಪ್ರಶಿಕ್ಷಣಾರ್ಥಿಗಳ ಕೌಶಲ್ಯ ಅಭಿವೃದ್ಧಿಯತ್ತ ಗಮನಹರಿಸಬೇಕು.
18. ಮೂರೂ ಸಂಸ್ಥೆಗಳಲ್ಲಿ ಖಾಲಿಯಿರುವ ಬೋಧಕರಹುದ್ದೆಗಳನ್ನು ತುಂಬಲು ವಿಸ್ತೃತವಾದ Expression of Interest (EoI) ಅನ್ನು ಹೊರಡಿಸುವ ನಿಟ್ಟಿನಲ್ಲಿ ಎಲ್ಲಾ ಬೋಧಕರಿಂದ ಅಭಿಪ್ರಾಯಗಳನ್ನು ಆಹ್ವಾನಿಸಲಾಗಿತ್ತು. ಮಂಗಳವಾರ ಅಂದರೆ ದಿನಾಂಕ 02.09.2014ರೊಳಗಾಗಿ ಈ ಕುರಿತು ಎಲ್ಲಾ ಬೋಧಕರು ತಮ್ಮ ಸಲಹೆಗಳನ್ನು ಇ-ಮೇಲ್ ಮೂಲಕ ಮಹಾ ನಿರ್ದೇಶಕರಿಗೆ ಸಲ್ಲಿಸಲು ಸೂಚಿಸಲಾಯಿತು.
19. ಸಂಸ್ಥೆಯಲ್ಲಿ ಎಲ್.ಎಂ.ಎಸ್ ಹಾಗೂ ಎಫ್.ಎಂ.ಎಸ್ ಕುರಿತು ತರಬೇತಿಯನ್ನು ಆಯೋಜಿಸಿದ್ದು ಸಂಸ್ಥೆಯ ಎಲ್ಲಾ ಲಿಪಿಕ ಸಿಬ್ಬಂದಿ ಹಾಗೂ ತರಬೇತಿ ಸಹಾಯಕರು ಭಾಗವಹಿಸಬೇಕಾಗಿ ಸೂಚಿಸಲಾಯಿತು. ಇನ್ನು ಮುಂದೆ ಎಲ್.ಎಂ.ಎಸ್. ಮತ್ತು ಎಫ್.ಎಂ.ಎಸ್ ಮೂಲಕವೇ ಕಡತಗಳನ್ನು ಕಳುಹಿಸಲು ತಿಳಿಸಲಾಯಿತು.
20. ಮೂರು ಸಂಸ್ಥೆಗಳಲ್ಲಿ ಹಾಜರಾತಿಗಾಗಿ ಬಯೋ ಮೆಟ್ರಿಕ್ ಸಿಸ್ಟಂಅನ್ನು ಹಾಗೂ ಸಿ.ಸಿ.ಟಿ.ವಿಯನ್ನು ಶೀಘ್ರದಲ್ಲೇ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.
21. ಸಂಸ್ಥೆಯ ಎಲ್ಲಾ ಹೊರಗುತ್ತಿಗೆ ಸೇವೆಗಳಿಗೆ ಹೊಸದಾಗಿ ಟೆಂಡರನ್ನು ಕರೆಯಲಾಗಿದ್ದು, ಇನ್ನುಳಿದ ಟೆಂಡರ್‌ಗಳನ್ನು ಸದ್ಯದಲ್ಲಿಯೇ ಕರೆಯಲಾಗುವುದು.
22. ಕಡ್ಡಾಯವಾಗಿ ಪ್ರಕಟಿಸಬೇಕಾದ ಮಾಹಿತಿಯಡಿಯಲ್ಲಿ ಸಂಸ್ಥೆಯ ಎಲ್ಲಾ ವಸತಿ ನಿಲಯದ ಖಾತೆಯು ಸೇರಿದಂತೆ ಹಣಕಾಸು ಖಾತೆಗಳನ್ನು ನಿಯಮಾನುಸಾರ ಕಾಲೋಚಿತಗೊಳಿಸಿ ಅದರ ವಿವರಗಳನ್ನು ಸ್ಕ್ಯಾನ್ ಮಾಡಿ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಕೂಡಲೇ ಅಳವಡಿಸಲು ಮೇಲ್ವಿಚಾರಕರಿಗೆ (warden) ಸೂಚಿಸಲಾಯಿತು.
23. ಸಂಸ್ಥೆಯ ಆವರಣದಲ್ಲಿ ಪ್ರಗತಿಯಲ್ಲಿರುವ ಕಟ್ಟಡ ನಿರ್ಮಾಣದ ಮಂಜೂರಾತಿ, ನಕ್ಷೆ, ಪರಿವೀಕ್ಷಣೆ ಮಾಡಿದ ವಿವರ, ಹಣ ಪಾವತಿಯ ಸಂಪೂರ್ಣ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲಾಯಿತು.
24. ಸಂಸ್ಥೆಯಲ್ಲಿ ಶೇಕಡ 90ರಷ್ಟು ಮಹಿಳಾ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು ಸಂಸ್ಥೆಯಲ್ಲಿ ಲೈಂಗಿಕ ದೌರ್ಜನ್ಯ ರಕ್ಷಣಾ ಸಮಿತಿಯು ಇಲ್ಲದಿರುವುದು ವಿಷಾಧನೀಯ. ಕಾರಣ ಮುಂದಿನ 15 ದಿನಗಳಲ್ಲಿ ಈ ಸಮಿತಿಯ ರಚನೆಯಾಗಬೇಕಿದೆ ಹಾಗೂ ಮುಂದಿನ 20 ದಿನಗಳಲ್ಲಿ ಸಮಿತಿ ಸಭೆ ಸೇರಬೇಕು.
25. ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಲು ಇಚ್ಚಿಸುವ ಎಲ್ಲಾ ಬೋಧಕರು/ ಸಮಾಲೋಚಕರು/ ಸಿಬ್ಬಂದಿಗಳು ಹತ್ತನೇ ತರಗತಿ ಅಥವಾ ತತ್ಸಮಾನ ಕನ್ನಡ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
26. ಮುಂದಿನ ಬೋಧಕರ ಸಭೆಯನ್ನು ದಿನಾಂಕ 12.09.2014ರಂದು ಬೆಳಗ್ಗೆ 09.30ಗಂಟೆಗೆ ಆಯೋಜಿಸಲಾಗಿದೆ. ಎಲ್ಲಾ ಬೋಧಕರು 05 ನಿಮಿಷಗಳ ಪವರ್ ಪಾಯಿಂಟ್ ಪ್ರಸೆಂಟೇಷನ್ ಮಾಡಬೇಕು ಹಾಗೂ 05 ನಿಮಿಷ ಚರ್ಚೆಗೆ ಅವಕಾಶವಿರುತ್ತದೆ. ಪವರ್ ಪಾಯಿಂಟ್ ಪ್ರಸೆಂಟೇಷನ್‌ನಲ್ಲಿ ಏಪ್ರಿಲ್ 2014ರಿಂದ ಇಲ್ಲಿಯವರೆವಿಗೂ ನಡೆಸಿದ ತರಬೇತಿಯ ವಿವರಗಳನ್ನು ಹಾಗೂ ಬೋಧಕರು ತೆಗೆದುಕೊಂಡ ಅಧಿವೇಶನಗಳ ವಿವರಗಳನ್ನು ಒಳಗೊಂಡಿರಬೇಕು. ಹಾಗೂ Innovative Practices ಗೆ ಪ್ರಾಜೆಕ್ಟ್ ಪ್ರೊಪೋಸಲ್‌ಗಳನ್ನು ನೀಡಬೇಕು.

ಜಂಟಿ ನಿರ್ದೇಶಕರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಸಂಸ್ಥೆಯ ಅಧಿಕಾರಿ ಸಿಬ್ಬಂದಿ ವರ್ಗದವರು ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದರ ಬಗ್ಗೆ ಸ್ಪಷ್ಟವಾಗಿ ಸೂಚಿಸಲಾಗಿದೆ. ಅದರಂತೆ

ಎಲ್ಲರೂ ಕಾರ್ಯನಿರ್ವಹಿಸಬೇಕಾಗಿ ಸೂಚಿಸಿದರು. ಇನ್ನು ಮುಂದೆ ತರಬೇತಿಗಳನ್ನು ಬೇಡಿಕೆ ಆಧಾರದ ಮೇಲೆ ಆಯೋಜಿಸಲಾಗುವುದು.

ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕರು ಮಾತನಾಡಿ ಅಬ್ದುಲ್ ನಝೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿಯೂ ಸಹ ಪಾರದರ್ಶಕವಾಗಿ ಗುಣಮಟ್ಟ ತರಬೇತಿಗೆ ಅನುಕೂಲವಾಗಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ನಂತರ ನಿರ್ದೇಶಕರು ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಇವರು ಮಾತನಾಡಿ ಸಂಸ್ಥೆಯ ಆರ್ಥಿಕ ವಹಿವಾಟಿನಲ್ಲಿ ನಿಯಮಗಳು ಮತ್ತು ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲು ಅಗತ್ಯ ಕ್ರಮ ವಹಿಸಲಾಗುತ್ತಿರುವುದಾಗಿ ಹಾಗೂ ತರಬೇತಿಯ ಗುಣಮಟ್ಟವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕ್ರಮ ವಹಿಸುತ್ತಿರುವುದಾಗಿ ತಿಳಿಸಿದರು.

ಸಭೆಗೆ ಹಾಜರಾದವರ ಪಟ್ಟಿಯನ್ನು ಅನುಬಂಧ –ಅ ರಲ್ಲಿ ಲಗತ್ತಿಸಿದೆ.

ನಂತರ ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಮಹಾ ನಿರ್ದೇಶಕರು.

<u>ಪ್ರತಿಯನ್ನು:-</u>

1) ಮಹಾ ನಿರ್ದೇಶಕರ ಆಪ್ತ ಶಾಖೆ.
2) ಜಂಟಿ ನಿರ್ದೇಶಕರು(ಆಡಳಿತ)/(ತರಬೇತಿ), ಆಡಳಿತ ತರಬೇತಿ ಸಂಸ್ಥೆ, ಮೈಸೂರು.
3) ನಿರ್ದೇಶಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು, ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4) ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು, ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5) ಮೂರೂ ಸಂಸ್ಥೆಗಳ ಬೋಧಕರು/ಸಮಾಲೋಚಕರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6) ಹೆಚ್ಚುವರಿ ಪ್ರತಿ.